ದಿಃ 04.07.2022 ರಂದು_ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀಯುತ ಸಿ.ಎಸ್. ವಕೀಲರಿಂದ

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಅಂಶಗಳೆಲ್ಲವೂ ನನಗೆ ಗೊತ್ತಿರುತ್ತದೆ. ನಾನು ನನ್ನ ತಾಯಿ ಮತ್ತು ನನ್ನ ಮಾವನ ಪರವಾಗಿ ವಿಶೇಷ ಮುಕ್ತಿಯಾರ್ ಪತ್ರವನ್ನು ಪಡೆದುಕೊಂಡು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ. ನನ್ನ ತಾಯಿ ಮತ್ತು ಮಾವನರಿಗೆ ಅನಾರೋಗ್ಯ ಇರುತ್ತದೆ ಹಾಗೂ ಅವರಿಗೆ ವಯಸ್ಸಾಗಿರುತ್ತದೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ, ಈ ನನ್ನ ಮುಖ್ಯ ವಿಚಾರಣೆಗೆ ನನ್ನ ತಾಯಿ, ನನ್ನ ಮಾವ, ನಮ್ಮ ನ್ಯಾಯಾಧೀಶರು ಹಾಗೂ ನಾನು ಎಲ್ಲರೂ ಸೇರಿ ಕೊಟ್ಟಿರುತ್ತೇವೆ. ನಾನು ಎಂ.ಎ ಪೊಲಿಟಿಕಲ್ ಸೈನ್ಸ್ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಆಂಗ್ಲ ಭಾಷೆ ಓದಲು ಚೆನ್ನಾಗಿ ಬರುತ್ತದೆ. ನಾನು ಆ ದಿನ ಕನ್ನಡ ಭಾಷೆಯಲ್ಲಿ ಮಾಹಿತಿ ನೀಡಿದ್ದೆ ನಮ್ಮ ವಕೀಲರು ಆಂಗ್ಲ ಭಾಷೆಯಲ್ಲಿ ಬೆರಳಚ್ಚು ಮಾಡಿ ನೀಡಿರುತ್ತಾರೆ. ನನಗೆ ಆಂಗ್ಲ ಭಾಷೆಯ ಮೇಲೆ ಒಳ್ಳೆಯ ಹಿಡಿತ ಇರುತ್ತದೆ.

2) ಈ ದಾವೆಯನ್ನು Delcaration ಗಾಗಿ, ಶಾಶ್ವತ ನಿರ್ಭಂದಕಾಜ್ಞೆಗಾಗಿ ಹಾಗೂ Adverse possession ಗಾಗಿ ಸಲ್ಲಿಸಿರುತ್ತೇವೆ. ಈ ದಾವೆಯನ್ನು ಸ.ನಂ.269/2 ಎ 3 ಎಕರೆ 9 ಗುಂಟೆ ಮತ್ತು 5 ಗುಂಟೆ ಖರಾಬಿಗಾಗಿ ಸಲ್ಲಿಸಿರುತ್ತೇವೆ. ಸ.ನಂ.269/2 ರ ಪೂರ್ವಕ್ಕೆ ಈಗ ಬಂಡೀದಾರಿ, ಪಶ್ಚಿಮಕ್ಕೆ ಆದಿಲಕ್ಷ್ಮಮ್ಮ ಮತ್ತು ಕೆ.ವಿ.ವೆಂಕಟಶಿವಾರೆಡ್ಡಿ, ಉತ್ತರಕ್ಕೆ ಕೆರೆಪ್ಪನವರ ನರಸಪ್ಪ ಮತ್ತು ಟಿ.ನರಸಾರೆಡ್ಡಿಯವರ ಜಮೀನು ಮತ್ತು ದಕ್ಷಿಣಕ್ಕೆ ಗಂಗಸಂದ್ರದ ಗಡಿ ಇರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಕೆ.ವಿ.ವೆಂಕಟ ರಮಣಪ್ಪ ಬಿನ್

ಆದೆಪ್ಪ ನವರಿಗೆ 6 ಜನ ಮಕ್ಕಳು ಎಂದು ತೋರಿಸಿದ್ದು ಅದಕ್ಕಾಗಿ ನಾನು ವಂಶವೃಕ್ಷವನ್ನು ಹಾಜರು ಮಾಡಿರುತ್ತೇನೆ. ನಾವು ಈ ದಾವೆಯನ್ನು ಮುದ್ದು ಗಂಗಮ್ಮ ಕೋಂ ಬಾಲಪ್ಪ, ರತ್ನಮ್ಮ ಕೋಂ ಬಾಬಣ್ಣ, ಜಯಮ್ಮ ಕೋಂ ನಾರಾಯಣರೆಡ್ಡಿ, ರಾಮಕೃಷ್ಣಾರೆಡ್ಡಿ ಬಿನ್ ನಾರಾಯಣರೆಡ್ಡಿ, ನರಸಿಂಹರೆಡ್ಡಿ ಬಿನ್ ವೈ.ಎನ್. ನಾರಾಯಣರೆಡ್ಡಿಯವರ ವಿರುದ್ದ ಸಲ್ಲಿಸಿರುತ್ತೇವೆ. ಪ್ರತಿವಾದಿ 3 ರಿಂದ 5 ರವರು ನಮಗೆ ಸಂಬಂಧಿಕರಲ್ಲ, ಅವರುಗಳು ನಮ್ಮ ಗ್ರಾಮದವರು ಎನ್ನುವುದು ಸರಿ. ದಾವಾ ಅನುಸೂಚಿ ಸ್ವತ್ತಿಗೆ ಪ್ರತಿವಾದಿ 3 ರಿಂದ 5 ರವರೇ ಮೂಲತಃ ಮೂಲ ಮಾಲೀಕರು ಎನ್ನುವುದು ಸರಿ. ಸಾಕ್ಷಿ ಮುಂದುವರೆಯುತ್ತಾ ಆದರೆ ಅವರು ಸ್ವಾಧೀನಾನುಭದಲ್ಲಿಲ್ಲ ಎಂದು ನುಡಿಯುತ್ತಾರೆ. 1963 ರಲ್ಲಿ ಪ್ರತಿವಾದಿ 3 ರಿಂದ 5 ರವರಿಗೆ ಯಾಲಗಿರಿ ನರಸಿಂಹಪ್ಪ ಅಲಿಯಾಸ್ ದೊಡ್ಡಪ್ಪನ ಮಗನಾದ ನಾರಾಯಣರೆಡ್ಡಿಯವರು ಮಾರಾಟ ಮಾಡಿರುವುದು ಎನ್ನುವುದು ಸರಿಯಲ್ಲ. ಅಂದಿನಿಂದ 2013ರವರೆಗೆ ಪಹಣಿಯಲ್ಲಿ ಇವರ ಹೆಸರೇ ಬರುತ್ತಿದೆ ಎನ್ನುವುದು ಸರಿ. ಅಲ್ಲಿಯವರೆಗೂ ಅವರೇ ಸ್ವಾಧೀನದಲ್ಲಿದ್ದರು ಎನ್ನುವುದು ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ ಶ್ರೀ.ಸಿ.ಎಸ್. ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-
ಹಿರಿಯ ಶ್ರೇಣಿ ನ್ಯಾಯಾಧೀಶರು
ಗೌರಿಬಿದನೂರು.